## 11. ಕೆಂಪೇಗೌಡ ಪ್ರತಿಮೆ – ನುಡಿದಂತೆ ನಡೆದ ಸರ್ಕಾರ

ಭಾರತದ ರಾಜಕಾರಣದಲ್ಲಿ ಬೆಂಗಳೂರಿಗೆ ವಿಶಿಷ್ಟ ಸ್ಥಾನವಿದೆ. ಉದ್ಯಾನವನಗಳ ನಗರ ಎಂದು ಪ್ರಖ್ಯಾತಿ ಪಡೆದಿರುವ ಬೆಂಗಳೂರು, ಕರ್ನಾಟಕವಷ್ಟೆ ಅಲ್ಲದೇ ಭಾರತದ ಎಲ್ಲ ಭಾಗಗಳ ಜನರಿಗೆ ಎಲ್ಲಾ ಕಾಲಕ್ಕೂ ಆಕರ್ಷಕವಾಗಿ ಕಾಣುವ ನಗರವಾಗಿದೆ. ಕ್ರಿ.ಶ.890ರಲ್ಲಿ ಬೆಂಗಳೂರಿಗೆ ಸಮೀಪದ ಬೇಗೂರಿನ ನಾಗೇಶ್ವರ ದೇವಸ್ಥಾನದಲ್ಲಿ ದೊರೆತ ಶಾಸನದಲ್ಲಿ ಬೆಂಗಳೂರಿನ ಭವ್ಯ ಇತಿಹಾಸದ ಹೆಜ್ಜೆ ಗುರುತುಗಳನ್ನು ಕಾಣಬಹುದು. ಕ್ರಿ.ಶ.1537ರಲ್ಲಿ ವಿಜಯನಗರ ಸಾಮ್ರಾಜ್ಯದ ಸಾಮಂತ ರಾಜ ಕೆಂಪೇಗೌಡ ಬೆಂಗಳೂರಿನಲ್ಲಿ ಮಣ್ಣಿನ ಕೋಟೆಯನ್ನು ಸ್ಥಾಪಿಸುವುದರ ಮೂಲಕ ಬೆಂಗಳೂರನ್ನು ಅತ್ಯಂತ ಸುಸಜ್ಜಿತವಾಗಿ ರೂಪಿಸುವ ಚಿಂತನೆಗೆ ಚಾಲನೆ ನೀಡಿದ್ದರು.

ಬೆಂಗಳೂರು ಸಾಮಾಜಿಕವಾಗಿ, ಆರ್ಥಿಕವಾಗಿ ತನ್ನ ವಿಶೇಷ ಆದ್ಯತೆಯನ್ನು ಮೈಗೂಡಿಸಿಕೊಂಡಿತ್ತು. ಕೆಂಪೇಗೌಡ ಕೃಷಿಗೆ ವಿಶೇಷ ಅದ್ಯತೆಯನ್ನು ನೀಡುವ ಸಲುವಾಗಿ ಬೆಂಗಳೂರು ಮತ್ತು ಇದರ ಆಸುಪಾಸಿನಲ್ಲಿ ಬೃಹತ್ತಾದ ಕೆರೆಗಳನ್ನು ಸ್ಥಾಪನೆ ಮಾಡಿದ್ದರು. ಆ ಕಾಲದಲ್ಲಿಯೂ ಒಂದು ಕೆರೆ ತುಂಬಿ ಕೋಡಿ ಬಿದ್ದರೆ ಆ ಕೋಡಿ ಬಿದ್ದ ನೀರು ನೇರವಾಗಿ ಮತ್ತೊಂದು ಕೆರೆಗೆ ತಲುಪುತ್ತಿತ್ತು. ಆ ಕೆರೆ ತುಂಬಿ ತುಳುಕಾಡಿದಾಗ ಅಲ್ಲಿ ಕೋಡಿ ಬಿದ್ದ ನೀರು ಹರಿಯುತ್ತ ಮತ್ತೊಂದು ಕೆರೆ ತುಂಬುತ್ತಿತ್ತು. ಹೀಗೆ ಬೆಂಗಳೂರು ಮತ್ತು ಇದರ ಸುತ್ತ ಮುತ್ತಲಿನ ನೂರಾರು ಕೆರೆಗಳು ತುಂಬಿ ತುಳುಕಾಡುವ "ನೀರು–ಸರಪಳಿ" ತಂತ್ರಜ್ಞಾನವನ್ನು ಕೆಂಪೇಗೌಡರು ಆ ಕಾಲದಲ್ಲಿ ಅಭಿವೃದ್ಧಿಪಡಿಸಿದ್ದರು. ಇದರ  ಪರಿಣಾಮ ಬೆಂಗಳೂರು ಸೇರಿದಂತೆ ಇದರ ಆಸುಪಾಸಿನ ಎಲ್ಲ ಪ್ರದೇಶಗಳಲ್ಲಿ ಸಮೃದ್ಧ ಕೃಷಿ ಚಟುವಟಿಕೆ ಸದಾ ಜೀವಂತವಾಗಿರುತ್ತಿತ್ತು.

ಇಂಥದ್ದೊಂದು ಬೆಂಗಳೂರನ್ನು ಸ್ಥಾಪಿಸಿದ ಕೆಂಪೇಗೌಡರ ನೆನಪು ನೂರು ವರ್ಷಗಳ ಕಾಲ ಚಿರಸ್ಥಾಯಿಯಾಗಿ ಉಳಿಯಬೇಕು. ವಿಶ್ವದ ಮೂಲೆ ಮೂಲೆಯಿಂದ ಬೆಂಗಳೂರಿಗೆ ಆಗಮಿಸುವ ಜನರು, ಯಾರು ಈ ಕೆಂಪೇಗೌಡ ಎನ್ನುವುದನ್ನು ಅರಿತುಕೊಳ್ಳಬೇಕು. ಈ ಮೂಲಕ ಬೆಂಗಳೂರಿನ ಪರಂಪರೆ, ಇತಿಹಾಸ, ಸಂಸ್ಕೃತಿ, ಜನ ಜೀವನ ಮೂಲೆ ಮೂಲೆಗಳಲ್ಲಿ ತಲುಪಿಸಬೇಕೆನ್ನುವ ದೃಷ್ಟಿಯಿಂದ ನನ್ನ ಸರ್ಕಾರ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಎದುರು 23 ಎಕರೆ ಪ್ರದೇಶದಲ್ಲಿ ಬೃಹತ್ತಾದ ಕೆಂಪೇಗೌಡ ಪ್ರತಿಮೆಯನ್ನು ಸ್ಥಾಪಿಸುತ್ತಿದೆ. ಅಲ್ಲಿ ಬೆಂಗಳೂರಿನ ಇತಿಹಾಸ, ಪರಂಪರೆ ಇವುಗಳನ್ನು ಪರಿಚಯಿಸುವ ಮುದ್ರಣ, ದೃಶ್ಯ, ಶ್ರವ್ಯ ವಿಭಾಗಗಳು ತಲೆ ಎತ್ತಲಿವೆ.

ಇದು ಕೇವಲ ನಾಡನ್ನು ಸುಭಿಕ್ಷವಾಗಿ ಆಳಿದ ವ್ಯಕ್ತಿಯ ಸ್ಮಾರಕ ಮಾತ್ರವಲ್ಲ. ಈ ಜಗತ್ತು ಇರುವವರೆಗೂ ಮಾಸಿಹೋಗದಂತೆ ನಾಡೊಂದನ್ನು ಕಟ್ಟಿಕೊಟ್ಟ ಮಹಾನ್ ಶಕ್ತಿಯ ನೆನಪನ್ನು ಜೀವಂತವಾಗಿಸುವ ಸ್ಮಾರಕ. ಇಂಥ ಭವ್ಯ ಸ್ಮಾರಕ ನಿರ್ಮಾಣ ಮಾಡುವ ಮೂಲಕ ನನ್ನ ಸರ್ಕಾರ ನುಡಿದಂತೆ ನಡೆದಿದೆ. ರಣಭೈರೇಗೌಡರ ವಂಶೀಕರಾದ ಒಂದನೇ ಕೆಂಪೇಗೌಡ, ಬೆಂಗಳೂರು ನಿರ್ಮಾತೃ ಕೆಂಪೇಗೌಡ, ಧರ್ಮದುರಂದರ ಕೆಂಪೇಗೌಡ ಇತ್ಯಾದಿಯಾಗಿ ಜನ ಮನ್ನಣೆಯನ್ನು ವಿಜಯನಗರ ಸಾಮ್ರಾಜ್ಯದ ಮೇಲೆ ಪರಮ ನಿಷ್ಠೆಯನ್ನು ಹೊಂದಿದ್ದ ಇವರು ದೂರದೃಷ್ಟಿಯಿಂದ ಕಿ.ಶ. 1530 ರಲ್ಲಿ ಆರಂಭಿಸಿ, ನಾಲ್ಕೇ ವರ್ಷಗಳ ಅವಧಿಯಲ್ಲಿ ಬೆಂಗಳೂರು ಎಂಬ ಸುಸಜ್ಜಿತ ಪಟ್ಟಣ ಕಟ್ಟಿದ್ದರು.

ಮೊರಸು ಒಕ್ಕಲಿಗರಾದ ರಣಭೈರೇಗೌಡರು ತಮ್ಮ ಏಳು ಮಂದಿ ಸೋದರರು, ಪತ್ನಿ ಮತ್ತು ಮಗಳೊಡನೆ ನೆರೆ ರಾಜ್ಯದ ಯಣಮುಂಜಿ ಪುತ್ತೂರಿನಿಂದ ಚಿಕ್ಕಬಳ್ಳಾಪುರದ ಆವತಿಗೆ ಬಂದರು ಎಂಬಂತೆಯೇ, ಇದು ಸರಿಯಲ್ಲ ,ಇವರು ಸ್ಥಳೀಕರು ಎಂಬ ವಾದಗಳು  ಇತಿಹಾಸತಜ್ಞರಲ್ಲಿವೆ.

ಆವತಿ ನಾಡು ಕಟ್ಟಿದ ರಣಭೈರೇಗೌಡರ ಪುತ್ರ ಜಯಪ್ಪಗೌಡ (ಜಯಗೌಡ)ರು ತಮ್ಮ ಕಾಲದಲ್ಲಿ ಯಲಹಂಕವನ್ನು ರಾಜಧಾನಿ ಮಾಡಿಕೊಂಡರು  (ಕ್ರಿ.ಶ.1418) ನಂತರ ಪಟ್ಟಕ್ಕೇರಿದ ಇವರ ಪುತ್ರ ಗಿಡ್ಡೇಗೌಡ, ಆನಂತರ ಪಟ್ಟಕ್ಕೇರಿದ ಇವರ ಪುತ್ರ ಕೆಂಪನಂಜೇಗೌಡರು ಜನಾನುರಾಗಿಗಳು ಎಂಬುದು ದಾಖಲಾಗಿದೆ.

ಕೆಂಪನಂಜೇಗೌಡ–ಲಿಂಗಮಾಂಬೆ ಪುತ್ರರಾಗಿ ಜನಸಿದ ಒಂದನೇ ಕೆಂಪೇಗೌಡರು (1513) ತಮ್ಮ ಹಿರೀಕರಂತೆಯೇ ಹಂಪಿ ಸಾಮ್ರಾಜ್ಯದ ನಿಷ್ಠರಾಗಿ ಜನಪ್ರಿಯತೆಯ ಉತ್ತುಂಗವನ್ನೇರಿದ್ದರು. ಅಂದಿನ ಹಂಪಿ ವೈಭವವನ್ನು ಕಣ್ಣಾರೆ ಕಂಡು ಅಂಥದ್ದೇ ನಗರವನ್ನು ತಾನು ಕಟ್ಟಬೇಕು ಎಂಬ ಮಹದಾಸೆಯನ್ನು

ಕಾರ್ಯಗತಗೊಳಿಸಲು ಅವಿರತವಾಗಿ ಯತ್ನಿಸಿದ್ದರ ಫಲವಾಗಿಯೇ ಬೆಂಗಳೂರು ಸುಸಜ್ಜಿತ ನಗರವಾಗಿ ಮೈದಾಳಿ ನಿಂತಿತ್ತು.

ಚಿಕ್ಕಪೇಟೆ – ದೊಡ್ಡಪೇಟೆ ಸಂಧಿಸುವ ಸ್ಥಳದಲ್ಲಿ ಎತ್ತುಗಳಿಗೆ ನೇಗಿಲು ಹೂಡಿ, ಅವು ಎಲ್ಲಿಯವರೆಗೆ ಸಾಗಿದ್ದವೋ ಅದನ್ನೇ ಬೆಂಗಳೂರು ಸರಹತ್ತುಗಳಾಗಿ ಗುರುತಿಸಿದ್ದರು. ಪೂರ್ವಕ್ಕೆ ಹಲಸೂರು, ಪಶ್ಚಿಮಕ್ಕೆ ಸೊಂಡೇಕೊಪ್ಪ (ಅರಳೇಪೇಟೆ ಅಂಚು), ಉತ್ತರಕ್ಕೆ  ಯಲಹಂಕ ಬಾಗಿಲು (ಮೈಸೂರು ಬ್ಯಾಂಕ್) ದಕ್ಷಿಣಕ್ಕೆ ಕೋಟೆ ಬಾಗಿಲು (ಸಂಜಯ ಚಿತ್ರಮಂದಿರ) ಇವು ಆಗಿನ ಗಡಿಯಾಗಿದ್ದವು ಅತಿ ಸಣ್ಣ ಜನಾಂಗವೂ ಸೇರಿದಂತೆ ಸಕಲ ಜಾತಿ ವರ್ಗ ಸಮುದಾಯವನ್ನೂ ಸಮಾನ ದೃಷ್ಟಿಯಿಂದ ನೋಡಿದ್ದರಿಂದಾಗಿಯೇ ಮಗ್ಗದವರಿಗೆ ಅರಳೇ ಪೇಟೆ, ಅರಿಸಿನ ಕುಂಕುಮ ಬಳೆ ಮಾರುವವರಿಗೆ ಬಳೇಪೇಟೆ, ಸಗಟು ವ್ಯಾಪಾರಿಗಳಾಗಿ ದೊಡ್ಡಪೇಟೆ, ಚಿಲ್ಲರೆ ವ್ಯಾಪಾರಿಗಳಿಗಾಗೀ ಚಿಕ್ಕಪೇಟೆ, ಅಕ್ಕಿ ಮಾರುವವರಿಗೆ ಅಕ್ಕಿಪೇಟೆ, ರಾಗಿ ಮಾರುವವರಿಗೆ ರಾಗಿ ಪೇಟೆ, ಕುಂಬಾರರಿಗೆ ಕುಂಬಾರ ಪೇಟೆ ಹೀಗೇ ಹತ್ತು ಹಲವು ವ್ಯವಸ್ಥೆಗಳನ್ನೂ ಹೊಸ ಬೆಂಗಳೂರಿನಲ್ಲಿ ಕೆಂಪೇಗೌಡರು ಮಾಡಿದ್ದರು.

ತೆರಿಗೆ ಸಂಗ್ರಹದಲ್ಲೂ ಸುಧಾರಿತ ಕ್ರಮ ಅನುಸರಿಸುತ್ತಿದ್ದ ಕೆಂಪೇಗೌಡರು ಯಲಹಂಕದಿಂದ ಬೆಂಗಳೂರಿಗೆ ರಾಜಧಾನಿ ಸ್ಥಳಾಂತರಿಸಿಕೊಂಡರೂ, ಆಡಳಿತ ಸುಧಾರಣೆಗಾಗಿ ಬೆಂಗಳೂರು ರಾಮಗಿರಿ ಮತ್ತು ಹುತ್ರಿದುರ್ಗ ಎಂಬ ಪ್ರದೇಶಗಳನ್ನು ವಿಕೇಂದ್ರಿಕರಣಗೊಳಿಸಿದ್ದರು. ಶಿವಗಂಗೆಯಲ್ಲಿ ಖಜಾನೆ ಇರಿಸಿದ್ದ ಕೆಂಪೇಗೌಡರು, ರಕ್ಷಣಾ ವ್ಯವಸ್ಥೆಯನ್ನು ಬಲಗೊಳಿಸುವುದಕ್ಕಾಗಿ ರಾಮನಗರ ಬಳಿ ರಾಮಗಿರಿ (ಕಾರ್ಖಾನೆ ಪಾಳ್ಯ)ಯಲ್ಲಿ ಮದ್ದುಗುಂಡುಗಳ ತಯಾರಿಕೆ, ಭದ್ರತೆಗಾಗಿ ಕೋಟೆ ನಿರ್ಮಾಣ ಮಾಡಿ ಅತ್ಯುತ್ತಮ ಪಹರೆ ವ್ಯವಸ್ಥೆ ಜಾರಿಗೊಳಿಸಿದ್ದರು.

ಕುಡಿಯುವ ಮತ್ತು ವ್ಯವಸಾಯದ ನೀರಿಗಾಗಿ ಕೆಂಪಾಂಬುಧಿ (ಗವೀಪುರಂ) ಕೆರೆ, ಧರ್ಮಾಂಬುಧಿ ಕೆರೆ (ಬಸ್ಸ್ ನಿಲ್ದಾಣ). ಸಂಪಂಗಿ ಕೆರೆ, ಗಿಡ್ಡಪ್ಪನ ಕೆರೆ ಕೋರಮಂಗಲ, ಆಡುಗೋಡಿ, ದೊಮ್ಮಲೂರು ಬೆಳ್ಳಂದೂರು ಕೆರೆ, ವರ್ತೂರು ಅಣೆಕಟ್ಟೆ, ಶಿವಗಂಗೆಯಲ್ಲಿ ನೀರು ಸಂಗ್ರಹಣಾ ವ್ಯವಸ್ಥೆ ಹೀಗೇ ಹಲವಾರೂ ನೀರಾವರಿ ವ್ಯವಸ್ಥೆಯನ್ನೂ ಮಾಡಿಕೊಟ್ಟಿದ್ದರು.

ಬೆಂಗಳೂರಿನಲ್ಲೇ ರಾಜರ ವಾಸಸ್ಥಳ ಮತ್ತು ಸಾರ್ವಜನಿಕರ ವಾಸಸ್ಥಳವನ್ನು ಗುರುತಿಸಿದ್ದ ಕೆಂಪೇಗೌಡರು ಅನೇಕಾನೇಕ ದೇವಾಲಯಗಳನ್ನು ನಿರ್ಮಿಸಿ, ಪುನರುಜ್ಜೀವನಗೊಳಿದ್ದರು, ಕಾಲುವೆ ಕಟ್ಟೆಗಳ ನಿರ್ವಹಣೆ, ದೇವಾಲಯಗಳ ನಿರ್ವಹಣೆ, ಕೂಲಿ, ಮಠ ಮತ್ತು ಪ್ರಸಾದ ನೀಡುವ ಹೊಣೆಯನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಿದ್ದು, ಅವರ ಚಿಂತನಶೀಲತೆಗೆ ಹಿಡಿದ ಕೈಗನ್ನಡಿಯಾಗಿದೆ.

ನಾಡಪ್ರಭು ಕೆಂಪೇಗೌಡರು ಬದುಕಿದ್ದು ನಿಖರವಾಗಿ ಎಷ್ಟು ವರ್ಷ ಎಂಬುದರ ಬಗ್ಗೆ ಒಮ್ಮತವಿಲ್ಲ. 1510 ರವರೆಗೆ, 1569 ರವರೆಗೆ, 1570 ರವರೆಗೆ, 1527ರವರೆಗೆ ಬದುಕಿದ್ದರು ಎಂಬ ತರ್ಕಗಳಿವೆ, ಹೀಗಾಗಿ ಇವರ ದೇಹಾಂತ್ಯದ ಬಗ್ಗೆ ಒಮ್ಮತದ ಅಂತಿಮ ದಿನಾಂಕ ಗೊತ್ತಿಲ್ಲಾದರೆ ಅವರು ದೂರದೃಷ್ಟಿಯಿಂದ ಸಕಲ ವ್ಯವಸ್ಥೆಗಳನ್ನೂ ಕಲ್ಪಿಸಿ, ನಿರ್ಮಿಸಿದ್ದ ಬೆಂಗಳೂರು ನಗರ ಸೂರ್ಯಚಂದ್ರ ಇರುವ ತನಕ ಹೇಗೆ ಜೀವಂತವಾಗಿ ನಳನಳಿಸುತ್ತಿರುವುದೋ ಅದರ ಜೊತೆಯಲ್ಲಿ ಕೆಂಪೇಗೌಡರ ಹೆಸರೂ ಕೂಡ ಉಳಿದೇ ಇರುತ್ತೇ,  ಬೆಳೆಯುತ್ತಲೇ ಇರುತ್ತೆ. ದೂರದೃಷ್ಟಿಯ ನಾಯಕರ ಅಚ್ಚಳಿಯದ ನೆನಪಿನ ಸರಮಾಲೆಗೆ ನಮ್ಮದೊಂದು ಸಣ್ಣ ಕಾಣಿಕೆಯಾಗಿ 'ಕೆಂಪೇಗೌಡ ಪ್ರತಿಮೆ' ಗೆ ಅಸ್ತಿಭಾರ ಹಾಕುತ್ತಿದ್ದೇನೆ.

ಲೇಖಕರು–ಬಿ.ಎಸ್. ಯಡಿಯೂರಪ್ಪ,<br>
ಮಾನ್ಯ ಮುಖ್ಯಮಂತ್ರಿಗಳು<br>
ಆಧಾರ:ಉದಯವಾಣಿ, ದಿನಾಂಕ:27.06.2020